ಮಕ್ಕಳ ಪದ್ಯ



ರಾಧೇಶ ತೋಳ್ಪಾಡಿ
ಕಲೆ: ಗಣೇಶ್ ಆಚಾರ್ಯ

# ಹಾವಿನ ಹಾಡು



ಹರಿಯುವೆನು ಮೆಲ್ಲ ಮೆಲ್ಲನೆ
ಹೊಟ್ಟೆಯೆಳೆಯುತ್ತ ಎಳೆಯುತ್ತ
ಮೆತ್ತಗಿನ ಮೈ ಚರ್ಮ ಹರಿಯದಂತೆ
ಚೂಪು ಮುಳ್ಳಿನ ಮೇಲೆ
ಬೆಣಚು ಕಲ್ಲಿನ ಮೇಲೆ
ಬಾಯ್ತೆರೆದು ಕಾದಿರುವ ದೊರಗು ಬಂಡೆಗಳ
ಮೇಲೆ
ಹೊಟ್ಟೆ ಹೊರೆಯಲೆಂದೇ.

ಸದ್ದಾಗುವಂತಿಲ್ಲ ಓಡಿ ಬರುವಿರಿ ನೀವು
ಹಾವು ಹಾವೆಂದು ಹೌಹಾರಿ
ಝುಳಪಿಸುತ ಬಡಿಗೆ ದೊಣ್ಣೆಗಳ
ಯುದ್ಧ ಸಾರಿದವರಂತೆ!

ತರಗೆಲೆಯ ಮೇಲೆ ಹರಿಯುವಂತಿಲ್ಲ
ಸಾರಿ ಹೇಳುವುದು ದಿಕ್ಕು ದಿಕ್ಕಿಗೆ ನನ್ನ ಆಗಮನ.
ಯಾರ ಕಣ್ಣಿಗೂ ಬೀಳುವಂತಿಲ್ಲ
ಎಲ್ಲರಿಗೂ ಅವರವರದೇ ಆದ ವಾದ, ಆತಂಕ.

ಚಾಡಿ ಹೇಳುವುದು ಭಯ ಬಿದ್ದು ಬೌವೌ
ಬೊಗಳಿ ನಾಯಿಯೂ ಯಾರ ಬಳಿಯೋ
ಅಥವಾ ತಕಪಕ ಕುಣಿದು
ಮಾಡದಿರದು ಏನಾದರೊಂದು ಕಿತಾಪತಿ.

ಈಗೀಗ ಹೆಚ್ಚುತಿದೆ ನವಿಲ ಸಂತಾನ
ಹೇಳಲಾಗದು ಯಾವಾಗ ಬಂದೆರಗುವುದು
ಗಿಡುಗ ಎಂದು.

